# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ವಾರ್ಡ್‌ಸಂಖ್ಯೆ 164, ವಿದ್ಯಾಪೀಠ ವಾರ್ಡ್, ವಿದ್ಯಾಪೀಠ ಸರ್ಕಲ್, ಬೆಂಗಳೂರು,**

---

ಸಂಖ್ಯೆ:ಸ.ಅ/ವಾ-164/ಪಿಆರ್/2020-21　　　　　　　　　　ದಿನಾಂಕ 7/11/2020

## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

**ವಿಷಯ :** ಮಾನ್ಯ ಆಯುಕ್ತರು - ಬಿ.ಬಿ.ಎಂ.ಪಿ.ರವರ ಕಛೇರಿ ಆದೇಶದ ಸಂಖ್ಯೆ ಬಿ12(5)/ಪಿಆರ್/35/2020-21, ದಿನಾಂಕ: 21.09.2020ರ ಆದೇಶದಂತೆ ದಿನಾಂಕ 7-11-2020ರಂದು ವಾರ್ಡ್ ಸಂಖ್ಯೆ 164, ವಿದ್ಯಾಪೀಠ ವಾರ್ಡ್‌ನಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

*****

**ಸ್ಥಳ – ವಾರ್ಡ್ 164ರ ಶ್ರೀಕಂಠೇಶ್ವರ ಪಾರ್ಕ್ ಹತ್ತಿರ ಇರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿಯಲ್ಲಿ**

**ಸಮಯ – ಪೂರ್ವಾಹ್ನ 10.30 ಗಂಟೆಗೆ**

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ**

| ಕ್ರ.ಸಂ. | ಹೆಸರು | ಪದನಾಮ |
|---|---|---|
| 1. | ವಿಜಯಕುಮಾರ್ ಆರ್. | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು — ಉ.ನಿ. ([illegible]) |
| 2. | ಸಂದೀಪ್ | ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗಿರಿನಗರ ಉಪವಿಭಾಗ |
| 3. | ಶ್ರೀ ಎನ್.ಎಸ್. ಪ್ರಕಾಶ್ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು, ವಾರ್ಡ್-164, ವಿದ್ಯಾಪೀಠ |
| 4. | ಶ್ರೀಧರ್ | ಸಹಾಯಕ ಇಂಜಿನಿಯರ್, ಬೆಂಗಳೂರು ಜಲಮಂಡಲಿ |
| 5. | ಶ್ರೀ ಸುನಿಲ್ | ಹಿರಿಯ ಆರೋಗ್ಯ ಪರಿವೀಕ್ಷಕರು (ಬಸವನಗುಡಿ ವಲಯ) |
| 6. | ಶ್ರೀ ಹರೀಶ್ | ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 164 |
| 7. | ಶ್ರೀಮತಿ ಲಕ್ಷ್ಮಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 164 |
| 8. | ಶ್ರೀ ಧವಳೇಶ್ | ಸಹಾಯಕ ಅಭಿಯಂತರರು (ಬೆಸ್ಕಾಂ) |
| 9. | ಯೋಗಾನಂದ | ವಾರ್ಡ್ ಹಿರಿಯ ನಾಗರಿಕರು |
| 10. | ಶ್ರೀ ಕುಮಾರ್ | ವಾರ್ಡ್ ಹಿರಿಯ ನಾಗರಿಕರು |



Scanned with Ca

ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳಾದ ಶ್ರೀ ವಿಜಯಕುಮಾರ್‌ರವರು ಸ್ವಪರಿಚಯ ಮಾಡಿಕೊಂಡು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) ಪ್ರಥಮತಃ ಶ್ರೀ ಸುನಿಲ್, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, 2 ವಾರಗಳಿಂದ ವಾರ್ಡ್ ವ್ಯಾಪ್ತಿಯ ಮೊಬೈಲ್ ಪಾಯಿಂಟ್, ಪರೀಕ್ಷಾಕೇಂದ್ರಗಳಲ್ಲಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಟೆಸ್ಟ್‌ಗಳನ್ನು ನಡೆಸಲಾಗುತ್ತಿದ್ದು, ಸರಿಸುಮಾರು 250 ರಿಂದ 300 ಟೆಸ್ಟ್‌ಗಳನ್ನು ಉಚಿತವಾಗಿ ಪಾಲಿಕೆಯ ವತಿಯಿಂದ ನಡೆಸಲಾಗುತ್ತಿದೆ ಎಂದು ಸಭೆಗೆ ತಿಳಿಸಿರುತ್ತಾರೆ.

2) ವಾರ್ಡ್‌ನಲ್ಲಿ ಕೋವಿಡ್-19ರ ಪ್ರಕರಣಗಳು ಹೆಚ್ಚಾಗದಂತೆ ಜಾಗ್ರತೆ ವಹಿಸಲು ಆರೋಗ್ಯ ಇಲಾಖೆಯವರಿಗೆ ಸಮರ್ಪಕವಾಗಿ ಔಷಧಿ ಸಿಂಪಡಣೆ ಕಾರ್ಯಗಳನ್ನು ಕೈಗೊಳ್ಳಲು, ವಾರ್ಡ್ ವ್ಯಾಪ್ತಿಯಲ್ಲಿ ಜನಸಂದಣಿ ಪ್ರದೇಶಗಳಲ್ಲಿ ಸಾರ್ವಜನಿಕ ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು ಹಾಗೂ ಮಾಸ್ಕ್ ಧರಿಸುವುದರ ಬಗ್ಗೆ ಅರಿವು ಮೂಡಿಸಲು ಸಹ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಲಾಗಿರುತ್ತದೆ.

3) ವಾರ್ಡ್‌ನಲ್ಲಿ ಒಟ್ಟು 935 ಪಾಸಿಟೀವ್ ಪ್ರಕರಣಗಳು ದಾಖಲಾಗಿದ್ದು, ಅದರಲ್ಲಿ ಚಾಲ್ತಿಯಲ್ಲಿರುವ ಪ್ರಕರಣ ಸಂಖ್ಯೆ 25, ಹೊಸ ಪ್ರಕರಣ 35, ಆರೈಕೆಯಲ್ಲಿರುವವರು 144 ಜನ, ಡಿಸ್ಚಾರ್ಜ್ ಆಗಿರುವ ಪ್ರಕರಣ 275, ಒಟ್ಟು ಮರಣ ಹೊಂದಿರುವ ಪ್ರಕರಣಗಳು -19, ಹೋಂ ಐಸೋಲೇಷನ್ ಪ್ರಕರಣ - 572 ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿರುತ್ತಾರೆ.

4) ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ ವಾಹನಗಳನ್ನು ನಿಲ್ಲಿಸಲು ಸ್ಥಳ ಇರುವುದಿಲ್ಲ ಹಾಗೂ ಸ್ಥಳದಲ್ಲಿ ಸಿಸಿ ಕ್ಯಾಮೆರಾ ಅಳವಡಿಸದೇ ಇರುವುದರಿಂದ ವಾಹನ ಬಿಡಿಭಾಗಗಳು ಕಳುವಾಗುವ ಪ್ರಸಂಗ ಬರುವುದರಿಂದ, ಸಿಸಿ ಕ್ಯಾಮರಾಗಳನ್ನು ಅಳವಡಿಸಲು ಕೋರಿರುತ್ತಾರೆ. ಈ ಮಧ್ಯೆ ಪಾಲಿಕೆ ವಾಹನಗಳ ಡೀಸೆಲ್ ಬಿಲ್ ಪಾವತಿ ವಿಳಂಬವಾಗುತ್ತಿದ್ದು ಉಪನಿಯಂತ್ರಕರು (ದಕ್ಷಿಣ) ಇವರಿಗೆ ತುರ್ತಾಗಿ ಪಾವತಿಸುವಂತೆ ಕೋರಲು ನೋಡಲ್ ಅಧಿಕಾರಿಯವರಿಗೆ ಮನವಿ ಮಾಡಿರುತ್ತಾರೆ.

5) ಸಭೆಯಲ್ಲಿ, ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿ ಶೇ. 70ರಷ್ಟು ಕಂದಾಯ ವಸೂಲಿಯಾಗಿದೆಯೆಂದು, ಕಂದಾಯ ಪರಿವೀಕ್ಷಕರು ಸಭೆಯಲ್ಲಿ ಹಾಜರಿದ್ದು ತಿಳಿಸುತ್ತಾ, ಈ ವರ್ಷದಲ್ಲಿ ರೂ. 447.60 ಲಕ್ಷಗಳ ಕಂದಾಯತೆರಿಗೆ ಸಂಗ್ರಹದ ಗುರಿ ಹೊಂದಿದ್ದು, ಇಲ್ಲಿಯವರೆಗೂ ರೂ. 373.79 ಲಕ್ಷ ರೂಗಳ ಕಂದಾಯ ವಸೂಲಿಯಾಗಿರುತ್ತದೆಂದೂ, ಬಾಕಿ ರೂ. 69.20 ಲಕ್ಷಗಳ ವಸೂಲಿಗಾಗಿ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಬಾಕಿ ಬರಬೇಕಾದ ತೆರಿಗೆ ಕಂದಾಯವನ್ನು ವಸೂಲಿ ಮಾಡಲು ಕಂದಾಯ ಪರಿವೀಕ್ಷಕರು ರವರಿಗೆ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಸೂಚಿಸಿರುತ್ತಾರೆ.



Scanned with Ca

6) 50 ಅಡಿ ರಸ್ತೆಯಲ್ಲಿ ಜಲಮಂಡಲಿಯವರು ಲೀಕೇಜ್ ಆಗಿರುವ ಸ್ಥಳದಲ್ಲಿ ಗುಂಡಿ ತೆಗೆದು ರಿಸ್ಟೋರೇಶನ್ ಮಾಡಿರುವುದಿಲ್ಲ. ವಿದ್ಯಾಪೀಠ, ಅಶೋಕನಗರ 1ನೇ ಕ್ರಾಸ್, 2ನೇ ಕ್ರಾಸ್‌ನಲ್ಲಿ ಮ್ಯಾನ್‌ಹೋಲ್‌ಗಳನ್ನು ರಸ್ತೆಯ ಮಟ್ಟಕ್ಕೆ ತರಬೇಕಾಗಿರುತ್ತದೆ. ಜಲಮಂಡಲಿಯವರು 7ನೇ ಅಡ್ಡರಸ್ತೆಯಲ್ಲಿ ವಾಟರ್‌ಪೈಪ್ ಲೀಕೇಜ್ ಆಗಿ ರಸ್ತೆಯು ಹಾಳಾಗಿ ಕುಸಿಯುತ್ತಿರುವುದರಿಂದ, ಪಾಲಿಕೆ ವತಿಯಿಂದ ರಿಸ್ಟೋರೇಷನ್ ಮಾಡಲಾಗುತ್ತಿದೆಯೇ ಎಂದು ಪರೀಕ್ಷಿಸಲು ಸಹಾಯಕ ಇಂಜಿನಿಯರ್‌ರವರಿಗೆ ಸೂಚಿಸಲಾಗಿರುತ್ತದೆ.

7) ಬೆಂಗಳೂರು ಜಲಮಂಡಲಿ ವತಿಯಿಂದ ಲೋ-ಲೇಯಿಂಗ್ ಏರಿಯಾಗಳಲ್ಲಿ ಮ್ಯಾನ್‌ಹೋಲ್‌ಗಳನ್ನು ಸ್ವಚ್ಛಗೊಳಿಸಲು ತಿಳಿಸಲಾಗಿರುತ್ತದೆ. ಕುಡಿಯುವ ನೀರಿನ ಸಮಸ್ಯೆಗಳಿದ್ದಲ್ಲಿ ಸರಿಪಡಿಸಲು ಹಾಗೂ ತಮ್ಮ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳು ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರಗಳನ್ನು ಮುಂದಿನ ಸಭೆಯಲ್ಲಿ ಹಾಜರುಪಡಿಸಲು ಸೂಚಿಸಲಾಗಿರುತ್ತದೆ.

8) ವಾರ್ಡ್ ವ್ಯಾಪ್ತಿಯ ಮುಖ್ಯರಸ್ತೆಗಳಲ್ಲಿ ಬೆಸ್ಕಾಂರವರು ರಸ್ತೆ ಅಗೆತ ಮಾಡಿ ಕೇಬಲ್ ಅಳವಡಿಸಿದ್ದು, ಸರಿಯಾಗಿ ರಸ್ತೆಗಳನ್ನು ಸರಿಪಡಿಸದೇ ಇರುವುದರ ಬಗ್ಗೆ ಸಂಬಂಧ ಪಟ್ಟ ಸಹಾಯಕ ಅಭಿಯಂತರರಿಗೆ ತಿಳಿಸಲಾಯಿತು. ಹಾಗೂ ಕೇಬಲ್‌ಗಳನ್ನು ರಸ್ತೆಯ ಮೇಲ್ಭಾಗದಲ್ಲಿ ಇರುವುದನ್ನು ತೆರವುಗೊಳಿಸಿ ರಸ್ತೆಯನ್ನು ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ತಿಳಿಸಲಾಯಿತು. ಆದಷ್ಟು ಬೇಗ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಅಗೆದಿರುವ ರಸ್ತೆಗಳನ್ನು ಸರಿಪಡಿಸಲು ಹಾಗೂ ಹೆಚ್ಚುವರಿಯಾಗಿ ಸ್ಥಳದಲ್ಲೇ ಬಿಟ್ಟಿರುವ ಕೇಬಲ್‌ಗಳನ್ನು ತೆರವುಗೊಳಿಸಲು ಬೆಸ್ಕಾಂ ಇಂಜಿನಿಯರ್‌ರವರಿಗೆ ಸೂಚಿಸಲಾಯಿತು.

9) ಬಾಲಾಜಿ ಲೇಔಟ್‌ನಲ್ಲಿ ಬಿದ್ದಿರುವ ಮರವನ್ನು ತೆರವುಗೊಳಿಸಲು ಹಾಗೂ ಬ್ಲಾಕ್ ವೈಸ್ ಡೆಬ್ರಿಸ್‌ನ್ನು ತೆರವುಗೊಳಿಸಲು ಮತ್ತು ಬೆಸ್ಕಾಂರವರು ಮರದ ಕೊಂಬೆಗಳನ್ನು ಕತ್ತರಿಸಿ ಸ್ಥಳದಲ್ಲಿಯೇ ಬಿಟ್ಟು ಹೋಗುತ್ತಿರುವುದನ್ನು, ಕತ್ತರಿಸಿದ ಕೊಂಬೆಗಳನ್ನು ಕಾಮಗಾರಿ ಇಲಾಖಾ ವತಿಯಿಂದಲೇ ತೆರವುಗೊಳಿಸಲು ಸೂಚಿಸಲಾಯಿತು.

10) ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಹೆಚ್ಚಾಗದಂತೆ ಜಾಗ್ರತೆ ವಹಿಸಲು ಮುಂಜಾಗ್ರತಾ ಕ್ರಮವಾಗಿ ಮಾರ್ಷಲ್‌ಗಳಿಗೆ ರಾತ್ರಿ 7.00 ರಿಂದ 9.30ವರೆಗೆ ವಾರ್ಡ್‌ನಲ್ಲಿ ಸಂಚರಿಸಿ ಸಾಮಾಜಿಕ ಅಂತರ ಕಾಪಾಡಿಕೊಳ್ಳಲು ಹಾಗೂ ಮಾಸ್ಕ್ ಧರಿಸುವುದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಹಾಗೂ ಮಾಸ್ಕ್ ಧರಿಸದಿರುವವರಿಗೆ ದಂಡ ವಿಧಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.



Scanned with Car

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್-164, ವಿದ್ಯಾಪೀಠ ವಾರ್ಡ್,

ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು
ವಾರ್ಡ್-164, ವಿದ್ಯಾಪೀಠ

ಪ್ರತಿಯನ್ನು:-

1. ಮಾನ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್.ಆರ್.ವೃತ್ತರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಆಡಳಿತ)ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ ಮತ್ತು ಘ.ತ್ಯಾ.ನಿ.) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು (ಆಡಳಿತ)ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ)ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಮುಖ್ಯ ಅಭಿಯಂತರರು (ದಕ್ಷಿಣ)ರವರ ಮಾಹಿತಿಗಾಗಿ ಸಲ್ಲಿಸಿದೆ.
7. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
8. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.

Scanned with Car